ಶ್ರೀ ಎಚ್. ಡಿ. ದೇವೇಗೌಡ.—ನಾಲೆಯ ಹಿಂಭಾಗದಲ್ಲಿರುವ ಗ್ರಾಮಗಳನ್ನು ಕೂಡ ಶಿಫ್ಟ್ ಮಾಡಬೇಕಾಗುತ್ತದೆ, ಇವುಗಳನ್ನು ಬದಲಾಯಿಸತಕ್ಕ ಕಾಲದಲ್ಲಿ ಬೇರೆ ಕಡೆ ಗ್ರಾಮಠಾಣ ರಿಸರ್ವ ಮಾಡತಕ್ಕುದು ಮತ್ತು ಗ್ರಾಮಗಳ ಬದಲಾವಣೆ ಸಂಬಂಧದಲ್ಲಿ ಕಾಂಪೆನ್‌ಸೇಷನ್ ಕೂಡ ಕೊಡ ಬೇಕಾಗುತ್ತದೆ. ಆದಕ್ಕೆ ಸರ್ಕಾರದವರು ಸೂಕ್ತವಾದ ನಿರ್ದೇಶನವನ್ನು ನೀಡುತ್ತಾರೆಯೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಇರುವ ನಿಯಮದ ಹಾಗೆ ನಾಲೆಯ ಕೆಳಭಾಗದಲ್ಲಿ ಬರತಕ್ಕ ಗ್ರಾಮಗಳನ್ನು ಬೇರೆ ಕಡೆಗೆ ಶಿಫ್ಟ್ ಮಾಡಬೇಕಾದ ಸಂದರ್ಭದಲ್ಲಿ ಯಾವ ಯಾವ ಗ್ರಾಮಗಳನ್ನು ಶಿಫ್ಟ್ ಮಾಡಬೇಕಾಗುತ್ತದೆ ಎನ್ನುವುದು ಸರ್ಕಾರದ ಮುಂದೆ ಇಲ್ಲ. ಆದುದರಿಂದ ಅಂಥ ಪರಿಸ್ಥಿತಿ ಇದ್ದು ನೀರಿನಿಂದ ಒದ್ದೆ ಆಗಿ ಗ್ರಾಮದ ಜನರ ಆರೋಗ್ಯ ಕೆಟ್ಟು ಹೋಗತಕ್ಕ ಸಂದರ್ಭದಲ್ಲಿ ಗ್ರಾಮಗಳನ್ನು ಶಿಫ್ಟ್ ಮಾಡಬೇಕಾಗುತ್ತದೆ. ಆಗ ಸರ್ಕಾರದವರು ಯೋಚನೆ ಮಾಡಬೇಕಾಗುತ್ತದೆ.

VARAHI HYDRO-ELECTRIC PROJECT IN COONDAPUR TALUK

820. SRI A. G. KODGI (BAINDUR).—

Will the Minister for Public Works and Electricity be pleased to state:—

The total amount spent for the investigation of Varahi-Hydro Electric Project and Varahi Reservoir in Coondapur Taluk, South Kanara ?

†SRH. M. CHANNABASAPPA.—(Minister for Public Works and Electricity)

Rs. 24, 46, 897 till the end of May 1972.

ಶ್ರೀ ಎ. ಜಿ. ಕೊಡಗಿ.—ಇಷ್ಟೊಂದು ಹೊತ್ತ ಖರ್ಚಾಗಿದ್ದರೂ ಕೂಡ ವರಾಹಿ ಜಲ ವಿದ್ಯುತ್ ಯೋಜನೆ ಯಾವ ಹಂತವನ್ನೂ ತಲುಪದೆ ಇರುವುದು ಕಂಡು ಬರುತ್ತಿರುವುದರಿಂದ, ಇದು ದಂಂದು ವೆಚ್ಚ ಎಂದು ಭಾವಿಸುವುದಿಲ್ಲವೇ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವುದೇ ಹಂತಕ್ಕೆ ಬಂದಿಲ್ಲ ಎಂದು ಮಾನ್ಯ ಸದಸ್ಯರು ಭಾವನೆ ಮಾಡಿದ್ದು ತಪ್ಪು.

ಶ್ರೀ ಎ. ಜಿ. ಕೊಡಗಿ.—ಕಾಳಿನದಿ ಉತ್ಪಾದನೆ ವೆಚ್ಚಕ್ಕಿಂತ ವರಾಹಿ ಜಲ ವಿದ್ಯುತ್ ಯೋಜನೆಯಂ ಉತ್ಪಾದನಾ ವೆಚ್ಚ ಕಡಿಮೆ ಎಂದು ತಜ್ಞರ ಅಭಿಪ್ರಾಯವಿದೆ. ಇದು ನಿಜವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಾಳಿನದಿಯಿಂದ ವಿದ್ಯುತ್ತನ್ನು ಉತ್ಪಾದನೆ ಮಾಡತಕ್ಕ ಮಾರ್ಗವೇ ಬೇರೆ, ವರಾಹಿಯಂದೇ ಬೇರೆ : ಕಾಳಿನದಿಗೆ ಸಂಬಂಧಪಟ್ಟಂತೆ ಬೇರೆ ಪ್ರಶ್ನೆ ಹಾಕಿದರೆ ಅದರ ವಿವರಗಳನ್ನು ಕೊಡಬಹುದು. ಈಗ ವರಾಹಿ ನದಿಗೆ ಸಂಬಂಧಪಟ್ಟಂತೆ ಯಾವ ವಿಷಯಗಳನ್ನು ಕೇಳಿದರೂ ಉತ್ತರ ಕೊಡುವುದಕ್ಕೆ ಸಿದ್ದವಾಗಿದ್ದೇನೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎಷ್ಟು ವರ್ಷದಿಂದ ಸರ್ವೇ ಕೆಲಸ ನಡೆಯುತ್ತಿದೆ. ಸರ್ವೇ ರಿಪೋರ್ಟ್ ಏನು ; ಇದು ಲಾಭದಾಯಕವಾಗಿದೆಯೋ ಇಲ್ಲವೋ ಇದನ್ನು ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—೧೯೬೧ನೇ ಇಸವಿಯಲ್ಲಿ ಪ್ರಾರಂಭವಾಗಿ ಸುಗಾಗಲೇ ನವೆಂಬರ್‌ನಲ್ಲಿ ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿ ಕೇಂದ್ರ ಸರ್ಕಾರಕ್ಕೆ ಅವರ ಕ್ಲಿಯರೆನ್ಸ್ ಬಗ್ಗೆ ಕಳುಹಿಸಿಕೊಟ್ಟಿದ್ದೇವೆ. ಅದರಲ್ಲಿ ಪವರ್ ಉತ್ಪನ್ನವಾಗತಕ್ಕುದು ೨,೬೦,೦೦೦ ಕಿಲೋವಾಟ್ ಎಂದು ಅಂದಾಜು. ವೆಚ್ಚ ೪೬ ಕೋಟಿ ರೂಪಾಯಿ ಟ್ರಾನ್ಸ್‌ಮಿಷನ್ ಲೈನೂ ಸೇರಿ.

ಶ್ರೀ ಕಾಗೋಡು ತಿಮ್ಮಪ್ಪ.—ಈ ಯೋಜನೆ ಎಲ್ಲಿಯವರೆಗೆ ಕಾರ್ಯಗತವಾಗಿದೆ ಮತ್ತು ಇದನ್ನು ಪೂರೈಸುವುದಕ್ಕೆ ಎಷ್ಟುಕಾಲ ಹಿಡಿಯುತ್ತದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇನ್‌ವೆಸ್ಟಿಗೇಷನ್ ಮುಗಿದು, ಪ್ರಾಜೆಕ್ಟ್ ರಿಪೋರ್ಟ್ ತಯಾರಾಗಿ, ಪ್ರಾಜೆಕ್ಟನ್ನು ಕೇಂದ್ರ ಸರ್ಕಾರಕ್ಕೆ ಕ್ಲಿಯರೆನ್ಸ್ ಬಗ್ಗೆ ಕಳುಹಿಸಿಕೊಟ್ಟಿದ್ದೇವೆ. ಒಂದು ಹಂತಕ್ಕೆ ಬಂದಿದೆ. ಇನ್‌ವೆಸ್ಟಿಗೇಷನ್ ಕೆಲಸ ಪೂರೈಸಿದೆ, A detailed examination of certain aspects of the Project is going on.
ಇದನ್ನು ಐದನೆ ಯೋಜನೆಯಲ್ಲಿ ಪ್ರಾರಂಭ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್. ವರಾಹಿ ಯೋಜನೆಯಿಂದ ಎಷ್ಟು ಎಕರೆ ಪ್ರದೇಶ ಮಂಳುಗ ಯಾಗುತ್ತದೆ ಎಂದು ಗೊತ್ತಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.— ಎಷ್ಟು ಪ್ರದೇಶ ಮುಳುಗಡೆಯಾಗುತ್ತದೆ ಎನ್ನುತಕ್ಕ ಮಾಹಿತಿ ಈಗ ಸದ್ಯದಲ್ಲಿ ನನ್ನ ಹತ್ತಿರ ಇಲ್ಲ.

ಶ್ರೀ ಎ. ಜಿ. ಕೊಡಗಿ—ಮಾನ್ಯ ಮಂತ್ರಿಗಳು ಹೇಳಿರುವುದರಲ್ಲಿ ಈ ಯೋಜನೆ ಇನ್ನೂ ಯಾವ ಹಂತವನ್ನೂ ಮುಟ್ಟಿಲ್ಲ ಎಂದು ಆವರೆ ಒಪ್ಪಿದ ಹಾಗೆ ಆಗಿದೆ. ಇದನ್ನು ಯಾವಾಗ ಕಾರ್ಯಗತ ಗೊಳಿಸುವುದಕ್ಕೆ ಪ್ರಯತ್ನ ಪಡುತ್ತೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಯಾವ ಹಂತಕ್ಕೂ ಬಂದಿಲ್ಲ ಎನ್ನುವುದನ್ನು ಸರ್ಕಾರ ಒಪ್ಪಿಲ್ಲ. ಆ ರೀತಿ ಮಾನ್ಯ ಸದಸ್ಯರು ತಿಳಿದುಕೊಡಿರುವುದು ತಪ್ಪು ಎಂದು ಹೇಳಿದೆ.

CENTRAL CLEARANCE FOR PROJECTS IN CAUVERY BASINS

825. SRI S. BANGARAPPA (Sorab).—Will the Minister of State for Major Irrigation be pleased to state :—

(*a*) whether it has come to the notice of the Government that during the period of Sri Veerendra Patil's Ministry the Central Water and Power Commission did not give technical clearance for several projects in Cauvery basin :

(*b*) if so, whether the present Government has taken any steps to obtain such clearance and more Central assistance to complete the Projects ?

SRI H. N. Nanje Gowda (Minister of State for Major Irrigation).—

(*a*) Yes.

(*b*) Government is pursuing all the cases with Government of India.

ಶ್ರೀ ಎಸ್. ಬಂಗಾರಪ್ಪ.—ಕಾವೇರಿ ಬೇಸಿನ್‌ನಲ್ಲಿ ಒಟ್ಟು ಎಷ್ಟು ಯೋಜನೆಗಳಿವೆ ; ಎಷ್ಟಕ್ಕೆ ತಾಂತ್ರಿಕ ಮಂಜೂರಾತಿ ದೊರಕಿದೆ ; ಎಷ್ಟು ವರ್ಷಗಳಿಂದ ಇನ್ನೂ ಕೆಲವಕ್ಕೆ ಮಂಜೂರಾತಿ ದೊರಕಿಲ್ಲ ?

ಶ್ರೀ ಎಚ್. ಎನ್. ನಂಜೇಗೌಡ.—ಒಟ್ಟು ಎಂಟು ಪ್ರಾಜೆಕ್ಟ್‌ಗಳಿವೆ. ಅದರಲ್ಲಿ ಮಂಚನಬೆಲೆ, ಗುಂಡ್ಲು, ತಾರಕ ಮತ್ತು ವಾಟದ ಹೊಳೆ ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಸಿಕ್ಕಿದೆ. ಕಬಿನಿ ರಿವೈಸ್ಡ್, ಹಾರಂಗಿ, ಹೇಮಾವತಿ ಮತ್ತು ಸುವರ್ಣಾವತಿ ಪ್ರಾಜೆಕ್ಟ್‌ಗಳಿಗೆ ಕ್ಲಿಯರೆನ್ಸ್ ಸಿಕ್ಕಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕ್ಲಿಯರೆನ್ಸ್ ಸಿಕ್ಕದೆ ಇರುವ ವಿಷಯದಲ್ಲಿ ಪತ್ರ ವ್ಯವಹಾರ ನಡೆಯುತ್ತಿದೆ ಎಂದು ಹೇಳಿದ್ದಾರೆ. ಎಷ್ಟು ವರ್ಷದಿಂದ ನಡೆಯುತ್ತಿದೆ ?